Houses for Harijans in Kolar District.

Q.—973. Sri A. MUNIYAPPA (Siddlaghatta-Chickballapur-Scheduled Castes).—

Will the Government be pleased to state :—

(*a*) whether it has come to their notice that the construction work of the houses for Harijans in Kolar District has been stopped at half-stage for want of grants ;

(*b*) the reason for not granting the same ?

A.—Sri K. HANUMANTHAIYA (Chief Minister).—

(*a*) There are 2,000 houses on which work is started and which are at different stages of progress for all of which it may not be possible to grant subventions during the current year.

(*b*) An allotment of Rs. 1,50,000 and special grants to the extent of Rs. 18,700 have been sanctioned to the Kolar District. Almost the entire grant has been spent. The houses for which it will not be possible to grant subventions this year will be taken up for assistance early in 1954-55.

ಶ್ರೀ ಎ. ಮುನಿಯಪ್ಪ.—ಎರಡು ಸಾವಿರ ಮನೆಗಳ ಕಾಮಗಾರಿಯನ್ನು ಪ್ರಾರಂಭಿಸಿರುವುದು ಎಲ್ಲಿ?

*ಶ್ರೀ ಕೆ. ಹನುಮಂತಯ್ಯ.—ಕೋಲಾರ ಜಿಲ್ಲೆಯಲ್ಲಿ.

ಶ್ರೀ ಎ. ಮುನಿಯಪ್ಪ.—ಈ ಬಗ್ಗೆ ಒದಗಿಸಿರುವ ಮೊಬಲಗನ್ನು ತಾಲ್ಲೂಕುವಾರು ಹಂಚಿಕೆ ಮಾಡಿದ ಮೇಲಲ್ಲವೇ ಈ ಮನೆಗಳನ್ನು ಮಂಜೂರು ಮಾಡುವುದು ?

ಶ್ರೀ ಕೆ. ಹನುಮಂತಯ್ಯ.—ಹೌದು.

ಶ್ರೀ ಎ. ಮುನಿಯಪ್ಪ.—ಹಾಗಾದರೆ ಅರ್ಧಕ್ಕೇ ಈ ಕೆಲಸ ನಿಂತಿರಲು ಕಾರಣವೇನು ?

ಶ್ರೀ ಕೆ. ಹನುಮಂತಯ್ಯ.—ಬಹುಶಃ ಕೆಲವು ಮನೆಗಳಿಗೆ ಹೆಚ್ಚು ಹಣ ಖರ್ಚಾಗಿ, ಇನ್ನು ಮುಂದೆ ಕೆಲಸ ಮಾಡಲು ಹಣವಿಲ್ಲದೇ ಇರಬಹುದು. ಈ ಪ್ರಶ್ನೆ ತಾವು ಕಳುಹಿಸಿದ ನಂದರ್ಭದಲ್ಲಿ ಇನ್ನೂ ಕೆಲವು ಮನೆಗಳು ಅರ್ಧದಲ್ಲಿಯೇ ನಿಂತಿರಬಹುದು.

ಶ್ರೀ ಎ. ಮುನಿಯಪ್ಪ.—ಹಾಗಾದರೆ ಈಗ ಅರ್ಧ ಕೆಲಸ ಆಗಿ ನಿಲ್ಲುವುದಕ್ಕೆ ದುಡ್ಡಿಲ್ಲದೆ ಇರುವುದೇ ಕಾರಣವೇನು ?

ಶ್ರೀ ಕೆ. ಹನುಮಂತಯ್ಯ.—ಬಹುಶಃ ಎಷ್ಟು ಮನೆಗಳು ಮಂಜೂರಾಗಿವೆಯೋ ಅವಕ್ಕಿಂತಲೂ ಜಾಸ್ತಿ ತೆಗೆದುಕೊಂಡಿರಬಹುದು. ಅರ್ಧ ಕೆಲಸ ನಡೆಯುತ್ತಾ ಇರುವಾಗ ಈ ಪ್ರಶ್ನೆಯನ್ನು ಕೇಳಿದೀರಿ, ಇನ್ನು ಮುಂದೂ ನಡೆಯಬಹುದು ಎಂದು ಕಾಣುತ್ತದೆ.

ಶ್ರೀ ಎ. ಮುನಿಯಪ್ಪ.—ನಾನು ಕೇಳುವುದು, ಮಂಜೂರು ಮಾಡಿರತಕ್ಕ ಮನೆಗಳಿಗೆ ದುಡ್ಡಿಲ್ಲ ಎಂದು ಕೆಲಸ ನಿಲ್ಲಿಸಿದ್ದಾರೆ ; ಕಾರಣ ಏನು ?

ಶ್ರೀ ಕೆ. ಹನುಮಂತಯ್ಯ.—ಕೆಲಸ ನಿಲ್ಲಿಸಿಲ್ಲ, ನಡೆಯುತ್ತಾ ಇದೆ ಎಂದು ನನ್ನ ಭಾವನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ರೂರಲ್ ಡೆವಲಪ್‌ಮೆಂಟ್ ಕಮಿಟಿಯವರು ಒಂದೊಂದು ಮನೆಗೆ 300 ರೂಪಾಯಿ ಕೊಡುವುದಕ್ಕೆ ಬದಲಾಗಿ 150 ರೂಪಾಯಿ ಗ್ರಾಂಟ್ ಕೊಟ್ಟಿದ್ದರಿಂದ ಹೆಚ್ಚು ಮನೆಗಳನ್ನು ಕಟ್ಟಲಿಕ್ಕೆ ಆರಂಭವಾಯಿತು ಎಂಬುದು ನರ್ಕಾರದವರ ಗಮನಕ್ಕೆ ಬಂದಿದೆಯೇ ?

Sri K. HANUMANTHAIYA.—Yes, Sir.

Works under Five-Year Plan in Kolar District.

Q.—1018. Sri M. C. ANJANEYA REDDY (Chintamani).—

Will the Government be pleased to state :—

(*a*) the works in each taluk of Kolar District under the Five-Year Plan ;

(*b*) of them, the extent of work carried out so far ?

A.—Sri K. HANUMANTHAIYA (Chief Minister).—

(*a*) The Five-Year Plan is drafted with reference to the State as a whole and talukwar allocations of works have not been made.

(*b*) Does not arise in view of reply to (*a*).

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—(ಎ) ಪ್ರಶ್ನೆಗೆ ಉತ್ತರವಾಗಿ ಕಾಮಗಾರಿಗಳ ಹಂಚಿಕೆಗಳನ್ನು ತಾಲ್ಲೂಕುವಾರಾಗಿ ಮಾಡಿಲ್ಲ ಎಂದು ಹೇಳಿದ್ದೀರಿ. ಕಾಮಗಾರಿಗಳು ಎಂದರೆ ಎಂಥೆಂಥವು, ಯಾವ ಯಾವ ತರಹದವು ಎಂಬುದನ್ನು ತಿಳಿದುಕೊಳ್ಳಬಹುದೇ ?

ಶ್ರೀ ಕೆ. ಹನುಮಂತಯ್ಯ.—Five-Year Plan ಪ್ರಕಾರ ಯಾವ ಯಾವ ಕೆಲಸ ಮಾಡಬೇಕೆಂದಿದೆ ನಂನ್ಥಾನದಲ್ಲಿ ಎನ್ನುವ ಒಂದು ಪುನ್ತಕವಿದೆ. ಅದರಲ್ಲಿ ನೋಡಿದರೆ ಗೊತ್ತಾಗುತ್ತದೆ. ತಾಲ್ಲೂಕು ತಾಲ್ಲೂಕಿಗೆ ಬೇರೆ ಸ್ಕೀಮು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ನವ ಚಿಂತಾಮಣಿ ತಾಲ್ಲೂಕಿನಲ್ಲಿ ಅಂಥ ಯಾವ ಕೆಲಸವೂ ನಡೆಯುತ್ತಾ ಇಲ್ಲ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಯಾವುದಾದರೂ ಕೆಲಸ ನಡೆಯುತ್ತಲೇ ಇರುತ್ತದೆ. ರಸ್ತೆ ಕೆಲಸ ನಡೆಯುತ್ತದೆ, ಸೇತುವೆ ಕೆಲಸ ನಡೆಯುತ್ತದೆ. ಆದ್ದರಿಂದ ಯಾವ ಕೆಲಸವೂ ನಡೆಯುತ್ತಿಲ್ಲ ಎಂದರೆ ಹೇಗೆ ಒಪ್ಪಿಕೊಳ್ಳಲಿ ?